(ಇಂದು ದಿನಾಂಕ 31-01-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ವಾದಿ ಪರ ಶ್ರೀ ಎಂ.ಎನ್.ಎಸ್. ವಕೀಲರಿಂದಃ**

ನನ್ನ ತಂದೆಯ ಹೆಸರು ಜಾನಪ್ಪ ಸಾಂತಯ್ಯ ದೇಶಭಂಡಾರಿ ಎಂದರೆ ಸರಿ. ವಾದಿಯವರ ತಂದೆಯ ಹೆಸರು ರಾಮ ವಾಸುದೇವ ದೇಶಭಂಡಾರಿ ಎಂದರೆ ಸರಿ. ನನ್ನ ತಂದೆ ವಾದಿಯವರ ತಾಯಿಯ ಚಿಕ್ಕಪ್ಪನ ಮಗ ಎಂದರೆ ಸರಿಯಲ್ಲ. ದಿವಗಿ ಗ್ರಾಮದ ಸ.ನಂ. 53 ಹಿಸ್ಸಾ 2 ರಲ್ಲಿ ಮೂಲತಃ 11 ಗುಂಟೆ ಕ್ಷೇತ್ರ ಇತ್ತು ಎಂದರೆ ಸರಿ. ಸದರಿ 11 ಗುಂಟೆ ಜಾಗದಲ್ಲಿ 6 ಗುಂಟೆ ಜಾಗ ನನ್ನ ತಂದೆಯವರಿಗೆ ಭೂನ್ಯಾಯ ಮಂಡಳಿಯಿಂದ ಮಂಜೂರು ಆಗಿರುತ್ತದೆ ಎಂದರೆ ಸರಿ. ಉಳಿದ 5 ಗುಂಟೆ ವಾದಿಯವರ ತಂದೆಯವರಿಗೆ ಸೇರಿದ್ದು ಎಂದರೆ ಸರಿ. ನನ್ನ ತಂದೆಯವರು ದಿಃ 16-05-2010 ರಂದು ತೀರಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರ ಸ.ನಂ. 53 ಹಿಸ್ಸಾ 2 ರ 6 ಗಂಟೆ ಜಾಗ ಪ್ರತಿವಾದಿಯವರ ಹೆಸರಿಗೆ ದಾಖಲಾಗಿ ಬಂದಿರುತ್ತದೆ ಎಂದರೆ ಸರಿ. ಪ್ರಾರಂಭದಲ್ಲಿ ಸ.ನಂ. 53 ಹಿಸ್ಸಾ 2 ರ 11 ಗುಂಟೆ ಜಾಗ ಒಂದೇ ಕಂಪೌಂಡನಲ್ಲಿ ಇತ್ತು ಎಂದರೆ ಸರಿ. ಸ.ನಂ. 53 ಹಿಸ್ಸಾ 2 11 ಗುಂಟೆ ಜಾಗದಲ್ಲಿ ವಾದಿಯವರ ತಂದೆಯವರು ತೆಂಗು, ಬಾಳೆ, ಅಡಿಕೆ ಮರಗಳನ್ನು ನೆಟ್ಟು ಕಬ್ಜಾ ವಹಿವಾಟು ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ವಾದಿಯವರ ತಂದೆಯವರು 11 ಗುಂಟೆ ಜಾಗದಲ್ಲಿ ಕಬ್ಜಾ ವಹಿವಾಟು ಮಾಡಿ ಬಂದಿರುವ ಕಾರಣ ನನ್ನ ತಂದೆಯವರು ಸ.ನಂ. 53 ಹಿಸ್ಸಾ 2 6 ಗುಂಟೆ ಜಾಗವನ್ನು ವಾದಿಯವರ ತಂದೆಯವರಿಗೆ ಕರಾರು ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕರಾರಿನ ಪ್ರಕಾರ ವಾದಿಯವರ ತಂದೆಯವರು ಪ್ರತಿಫಲ ಮೊತ್ತ ರೂ. 3,250/- ನ್ನು ಪ್ರತಿವಾದಿಯವರ ತಂದೆಯವರಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ.ನಂ. ನಂ. 11 ಗುಂಟೆ ಪೂರ್ತಿ ಜಾಗವನ್ನು 1989 ರ ಪೂರ್ವದಿಂದ ಅಂದರೆ 15 ವರ್ಷಗಳ ಹಿಂದೆ ವಾದಿಯವರ ತಂದೆಯವರು ಕಬ್ಜಾ ವಹಿವಾಟು

ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯವರ ಹೆಸರಿನಲ್ಲಿದ್ದ 6 ಗುಂಟೆ ಜಾಗವನ್ನು ಪ್ರತ್ಯೇಕ ಮಾಡಲು ಭೂಮಾಪನ ಇಲಾಖೆಯವರಿಗೆ ಅರ್ಜಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ. ಭೂಮಾಪನ ಇಲಾಖೆಯವರು ಮೋಜಣಿ ಮಡಲು ಸ್ಥಳಕ್ಕೆ ಬಂದಾಗ ಸದರಿ ಸ್ಥಳವು ವಾದಿಯವರ ತಂದೆಯವರ ಕಬ್ಜಾದಲ್ಲಿ ಇರುವುದಾಗಿ ವರದಿ ಬರೆದು ತಹಶೀಲ್ದಾರರವರಿಗೆ ಸಲ್ಲಿಸಿ ಅರ್ಜಿಯನ್ನು ವಿಲೇ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ವಾದಿಯವರ ತಂದೆಯ ವಿರುದ್ದ ಅಸಲು ದಾವಾ ಸಂಖ್ಯೆ 120/2011 ದಾವೆಯನ್ನು ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ವಾಂಟಣಿ ಕೇಳಿ ಸಲ್ಲಿಸಿರುತ್ತೇವೆ ಎಂದರೆ ಸರಿ. 2011 ನೇ ಇಸವಿಯಲ್ಲಿ ದಾವಾ ಸ.ನಂ. ನಲ್ಲಿ ನಮ್ಮ ಹೆಸರಿನಲ್ಲಿರುವ 6 ಗುಂಟೆ ಜಾಗವನ್ನು ಪ್ರತ್ಯೇಕ ಆಗದೇ ಇರುವ ಕಾರಣ ವಾದಿಯವರ ತಂದೆಯ ವಿರುದ್ದ ವಾಂಟಣಿ ಕೇಳಿ ಅಸಲು ದಾವೆ ಸಂಖ್ಯೆ 120/2011 ನ್ನು ನ್ಯಾಯಾಲಯದಲ್ಲಿ ಸಲ್ಲಿಸಿರುತ್ತೇವೆ ಎಂದರೆ ಸರಿ.

ಸದರಿ ಅಸಲು ದಾವೆ ಸಂಖ್ಯೆ 120/2011 ದಿಃ 28-02-2019 ರಂದು ವಜಾ ಆಗಿರುತ್ತದೆ ಎಂದರೆ ಸರಿ. ಸದರಿ ಅಸಲು ದಾವೆ ಸಂಖ್ಯೆ 120/2011 ರಲ್ಲಿ ಸ.ನಂ. 53 ಹಿಸ್ಸಾ 2 ರಲ್ಲಿರುವ ಪೂರ್ತಿ 11 ಗುಂಟೆ ಸ್ಥಳ ವಾದಿಯವರ ಕಬ್ಜಾ ವಹಿವಾಟಿನಲ್ಲಿ ಇದೆ ಎಂದು ನಿರ್ಣಯ ನೀಡಿರುತ್ತಾರೆ ಎಂದರೆ ಸಾಕ್ಷಿಯು ಸದರಿ ತೀರ್ಪಿನ ವಿರುದ್ದ ಮೇಲ್ಮನವಿಯನ್ನು ಸಲ್ಲಿಸಿರುವುದಾಗಿ ನುಡಿದಿರುತ್ತಾರೆ. ನಾವು ಸಲ್ಲಿಸಿದ ಮೇಲ್ಮನವಿ ಆರ್ ಎ ನಂ. 26/2020 ಆಗಿರುತ್ತದೆ ಎಂದರೆ ಸರಿ. ಸದರಿ ಆರ್ ಎ ನಂ. 26/2020 ಹಿರಿಯ ನ್ಯಾಯಾಲಯ ಕುಮಟಾದಲ್ಲಿ ವಜಾ ಆಗಿರುತ್ತದೆ ಎಂದರೆ ಸಾಕ್ಷಿಯು ಸದರಿ ತೀರ್ಪಿನ ವಿರುದ್ದ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುವುದಾಗಿ ನುಡಿದಿರುತ್ತಾರೆ.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

Sd/-

ಪ್ರಧಾನ ಸಿವಿಲ್ ಜಡ್ಜ, ಕುಮಟಾ